C.R.P.67

| Form No.4 (Civil) Deposition Sheets (R.P.No.57) |
|---|

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆಃ101/2023 C/W SC 113/2023**

ಪ್ರಾಸಾ. 04 ಚಾಸಾ. 04

| | |
|---|---|
| ಸಾಕ್ಷಿದಾರರ ಹೆಸರು | ಸುಧಾ |
| ಗಂಡನ ಹೆಸರು | ಪುಟ್ಟಸ್ವಾಮಿ |
| ವಯಸ್ಸು | 60 ವರ್ಷಗಳು |
| ಉದ್ಯೋಗ | ಗೃಹಿಣಿ |
| ವಾಸ | ದೊಡ್ಡರಸಿನಕೆರೆ |

ಸಾಕ್ಷಿಯನ್ನು ದಿನಾಂಕಃ07.04.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1, 3 ಗೊತ್ತು, ಮೃತ ಅರುಣ ಉಃ ಕಪ್ಪೆ ನನ್ನ ತಂಗಿಯ ಮಗ. ಚಾಸಾ-5 ಮತ್ತು 6 ಗೊತ್ತು, ಈ ಪ್ರಕರಣದಲ್ಲಿ ಹಾಗೂ ನ್ಯಾಯಾಲಯ ಮುಂದೆ ಇರುವ 1 ರಿಂದ 4ನೇ ಮತ್ತು 8ನೇ ಆರೋಪಿಗಳು ಗೊತ್ತು, 5, 7ನೇ ಆರೋಪಿತರು ಗೊತ್ತಿಲ್ಲ. ಸದರಿಯವರು ನಮ್ಮ ಗ್ರಾಮದವರು.

2. ನಾನು ಸುಮಾರು ಎರಡು ವರ್ಷದ ಹಿಂದೆ ನಾನು ಧರ್ಮಸ್ಥಳ ಸಂಘದ ಸೊಸೈಟಿಗೆ ಹಣ ಕಟ್ಟಲು ಮಧ್ಯಾಹ್ನ 4.00 ರಿಂದ 4.30 ಗಂಟೆಗೆ ಹೋದಾಗ ಅರುಣನಿಗೆ ಆಸ್ಪತ್ರೆಗೆ ಯಾರೋ ಕರೆದುಕೊಂಡು ಹೋದರು ಎಂದು ವಿಷಯ ಗೊತ್ತಾಯಿತು. ಆತನಿಗೆ ಏನಾಯಿತು ಮತ್ತು ಹೇಗೆ ತೀರಿಕೊಂಡ ಎಂದು ಗೊತ್ತಿಲ್ಲ. ಆತನ ಮೇಲೆ ಹಲ್ಲೆಯಾಗಿ ತೀರಿಕೊಂಡಿರುತ್ತಾನೆ ಎಂದು ನಂತರ ನನಗೆ ಗೊತ್ತಾಗಿರುತ್ತದೆ, ಆದರೆ ಯಾರು ಹಲ್ಲೆ ಮಾಡಿದರು, ಎಲ್ಲಿ ಮಾಡಿದರು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಘಟನೆ ನೋಡಿರುವುದಿಲ್ಲ ಮತ್ತು ಬಿಡಿಸಿರುವುದಿಲ್ಲ.

3. ಆರೋಪಿತರು ಅರುಣ್ ರವರಿಗೆ ಹಲ್ಲೆ ಮಾಡಿದುದನ್ನು ನಾನು ನೋಡಿರುವುದಿಲ್ಲ. ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಮು.ಮ.2 ನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿಃ20.11.2022 ರಂದು ಸಂಜೆ 4.00 ಸಮಯದಲ್ಲಿ ಚಾಸಾ-1 ಮತ್ತು 3 ಜೊತೇ ಮೃತ ಅರುಣ ಸೊಸೈಟಿ/ದರ್ಮಸ್ಥಳ ಸಂಘದ ನೇರದಲದಿಲ್ಲ ಬಂದಾಗ ಅರುಣನಿಗೆ 1, 3 ಮತ್ತು ಇತರರು ಸೇರಿ ಅಲ್ಲೇ ಬಿದ್ದಿದ್ದ ಒಂದು ಸಿಮೆಂಟ್ ಕಲ್ಲನ್ನು ಎತ್ತಿಕೊಂಡು ಗುದ್ದಿದ ಅರುಣ್ ಕೆಳಗಡೆ ಆಗ 2 ನೇ ಆರೋಪಿ ಮತ್ತು ಇನ್ನೊಬ್ಬ ಹುಡುಗ ಅರುಣನಿಗೆ ಕಾಲಿನಿಂದ ತುಳಿದನು, ಅದನ್ನು ನಾನು ಕಣ್ಣಾರೆ ನೋಡಿದೆ ಎಂದರೆ ಸರಿಯಲ್ಲ. ಆಗ ಉಳಿದ ಆರೋೇಪಿತರು ಅರುಣನ ಮೇಲೆ ಕಲ್ಲನ್ನು ಎತ್ತಿಕೊಂಡು ಹಣೆ ಮೇಲೆ ಹೊಡೆದಾಗ ನಾನು ಕೂಗಿಕೊಂಡು ಜಗಳ ಬಿಡಿಸಲು ಮುಂದಾದೆ ಎಂದರೆ ಸರಿಯಲ್ಲ. ಆಗ ಚಾಸಾ-1 ಆತನನ್ನು ಎತ್ತಿಕೊಂಡು ಸಹಾಕಾರ ಸಂಘನ ಮೆಟ್ಟಿಲಿನ ಮೇಲೆ ಕೂರಿಸಿ ಅರುಣನ ಮುಖ ಒರೆಸಿ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನು. ಚಾಸಾ-2 ತನ್ನ ವಾಹನದಲ್ಲಿ ಚಾಲನೆ ಮಾಡಿಕೊಂಡು ಅರುಣನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದನು.

2. ನಂತರ ಆತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಆತನ ಮೇಲೆ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಆತ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸ ಪಡೆಯುವ ಸಮಯದಲ್ಲಿ 10.30 ರಲ್ಲಿ ಮೃತಪಟ್ಟಿರುತ್ತಾನೆ ಎಂದರ ಸರಿ.

**3.** ನಾನು ಘಟನೆಯನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಕಾರ ನಾನು ಪೊಲೀಸರು ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನ ಎಂದರ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕಯನ್ನು ನಿಪಿ-12 ಎಂದು ಗುರುತಿಸಲಾಯಿತು. ಎಲ್ಲಾ ಆರೋಪಿತರು ಸೇರಿ ಮೃತ ಅರುಣನ ಮೇಲೆ ಹಲ್ಲೆ ಮಾಡಿದ ಕಾರಣ ಕಪ್ಪೆ ತೀರಿಕೊಂಡಿರುತ್ತಾನೆ ಎಂದು ನನಗೆ ಗೊತ್ತಿದ್ದರೂ ಸಹ ಈಗ ನಾನು ಆರೋಪಿತರಿಗೆ ನನಗೆ ಪರಿಚಯವಿದ್ದ ಕಾರಣ ಹಾಗೂ ನಮ್ಮ ಗ್ರಾಮದವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮು.ಮ.2 ರಿಂದ 1 ರಿಂದ 5 ನೇ ಆರೊಪಿತರು ಮೃತ ಅರುಣನ ಮೇಲೆ ಸೊಸೈಟಿ ಬಳಿ ಹಲ್ಲೆ ಮಾಡಿರುವುದನ್ನು ಕಣ್ಣಾರೆ ನೋಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್.ಡಿ.ಆರ್. ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.